# ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 23.07.2021ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2021ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯ ನಡವಳಿಗಳು.

ಉಪಸ್ಥಿತರು:

ಅನುಪಸ್ಥಿತರು:

**ಪ್ರಾರಂಭಿಕ**

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

- **ಸ್ವಾಗತ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಎಫ್) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ನೆಲೆಯಲ್ಲಿ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿರುವ ಫಾದರ್ ಆಲ್ವಿನ್ ಸೆರಾವ್, ಪ್ರಾಂಶುಪಾಲರು, ಸೈಂಟ್ ಆಂಟನಿ ಕಾಲೇಜ್ ಆಫ್ ಕಾಮರ್ಸ್, ನಾರಾವಿ ಅಂಚೆ, ಬೆಳ್ತಂಗಡಿ ತಾಲೂಕು ಇವರನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.

- **ಕೃತಜ್ಞತೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 28(1)(ಎಫ್) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ನೆಲೆಯಲ್ಲಿ ಸಿಂಡಿಕೇಟಿಗೆ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದ ಡಾ. ಮಧುಸೂಧನ್ ಭಟ್, ಪ್ರಾಂಶುಪಾಲರು, ಉಪೇಂದ್ರ ಪೈ ಮೆಮೋರಿಯಲ್ ಕಾಲೇಜು, ಉಡುಪಿ ಇವರ ಸದಸ್ಯತ್ವದ ಅವಧಿಯು ದಿನಾಂಕ 23.05.2021ರಂದು ಕೊನೆಗೊಂಡಿರುವುದರಿಂದ ಸದರಿಯವರನ್ನು ಸಿಂಡಿಕೇಟು ಸದಸ್ಯತ್ವದಿಂದ ಮುಕ್ತಗೊಳಿಸಲಾಗಿರುವ ವಿಷಯವನ್ನು ಕುಲಸಚಿವರು ಸಭೆಗೆ ತಿಳಿಸಿದರು.

ಇವರು ತಮ್ಮ ಸಿಂಡಿಕೇಟು ಸದಸ್ಯತ್ವದ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಇವರಿಗೆ ಸಿಂಡಿಕೇಟ್ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

## ಪ್ರಾಸ್ತಾವಿಕ

ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಈ ಕೆಳಗಿನ ವಿಷಯಗಳನ್ನು ಸಭೆಗೆ ತಿಳಿಸಿದರು.

1. 75ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಸ್ವೀಕೃತವಾದ ಮಾರ್ಗಸೂಚಿ ಮತ್ತು ನಿರ್ದೇಶನಗಳನ್ವಯ ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ನಡೆಸಿ ಕಾರ್ಯಕ್ರಮಗಳ ಎಲ್ಲಾ ದಾಖಲೆಗಳನ್ನು ಫೋಟೋ ಪ್ರತಿಗಳೊಂದಿಗೆ ಸರಕಾರಕ್ಕೆ ಸಲ್ಲಿಸಬೇಕಾಗಿರುವ ವಿಷಯವನ್ನು ಸಭೆಗೆ ತಿಳಿಸಿದರು. ಈ ಬಗ್ಗೆ ಈಗಾಗಲೇ ಸಮಿತಿಯನ್ನು ರಚಿಸಲಾಗಿದ್ದು ಸಮಿತಿಯ ವರದಿಯ ಆಧಾರದ ಮೇಲೆ ಮುಂದಿನ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

2. ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಕಾಲೇಜುಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕ್ರಮಬದ್ಧವಾಗಿ ಮತ್ತು ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸಲು ಹಂತ ಹಂತಗಳಲ್ಲಿ ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸುತ್ತಾ ಈ ಬಗ್ಗೆ ಉನ್ನತ ಶಿಕ್ಷಣ ಇಲಾಖೆ ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಕೈಗೊಂಡಿರುವ ಕ್ರಮಗಳ ಮತ್ತು ತಯಾರಿಸಿರುವ ರೂಪುರೇಷೆಗಳಂತೆ ಕ್ರಮಕೈಗೊಳ್ಳುವುದಾಗಿ ತಿಳಿಸಿದರು. ಪದವಿ ಮಟ್ಟದ ಕಾರ್ಯಕ್ರಮಗಳನ್ನು ನಾಲ್ಕು ವರ್ಷಗಳ ಬಹುಶಿಸ್ತೀಯ ಕಾರ್ಯಕ್ರಮಗಳನ್ನಾಗಿ ಪರಿವರ್ತಿಸಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನಿಂದ ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಮಾರ್ಗಸೂಚಿ ಸ್ವೀಕೃತವಾದ ನಂತರ ಕ್ರಮಕೈಗೊಳ್ಳುವ ಬಗ್ಗೆ ತಿಳಿಸಿದರು.

3. ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ಭೌತಿಕ ತರಗತಿಗಳನ್ನು ಸರಕಾರದ ನಿರ್ದೇಶನದಂತೆ ನಡೆಸಲಾಗುವ ವಿಚಾರವನ್ನು ಸಭೆಗೆ ತಿಳಿಸಿದರು.

4. ರಾಷ್ಟ್ರೀಯ ಮೌಲ್ಯಾಂಕನ ಸಂಸ್ಥೆ NAAC ನಿಂದ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ದೊರೆತಿರುವ "ಬಿ" ಗ್ರೇಡ್ ಮೇಲೆ ವಿಶ್ವವಿದ್ಯಾನಿಲಯವು ಅಪೀಲು ಸಲ್ಲಿಸಿದ್ದು, ಪ್ರಸ್ತುತ ಸದರಿ ಸಂಸ್ಥೆಯು ಗ್ರೇಡ್‌ನಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ತಿಳಿಸಿರುವುದರಿಂದ ಗ್ರೇಡನ್ನು ಉನ್ನತೀಕರಿಸಬೇಕಾದಲ್ಲಿ ಮುಂದಿನ ವರ್ಷ ಮಗದೊಮ್ಮೆ ನ್ಯಾಕ್ ಮಾನ್ಯತೆಗೆ ಒಳಪಡಬೇಕಾಗಿರುವ ವಿಚಾರವನ್ನು ತಿಳಿಸಿದರು. ಈ ಬಗ್ಗೆ ಸದರಿ ವಿಚಾರದಲ್ಲಿ ಅನುಭವಿ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳಲಾಗುವುದು ಎಂಬ ವಿಚಾರವನ್ನು ಸಹ ತಿಳಿಸಿದರು.

5. ರಾಜ್ಯ ಸರಕಾರವು ಎಲ್ಲಾ ಪದವಿ ಕಾಲೇಜುಗಳ ವಿದ್ಯಾರ್ಥಿಗಳ ಪ್ರವೇಶಾತಿ ಮತ್ತು ಪರೀಕ್ಷಾ ಪ್ರಕ್ರಿಯೆಗಳನ್ನು ನಡೆಸಲು UUCMS ಸಾಫ್ಟ್ ವೇರ್ ನ್ನು ಸಿದ್ಧಪಡಿಸುತ್ತಿದೆ. ಅದರಂತೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿಯೂ ಸದರಿ ಸಾಫ್ಟ್ ವೇರ್ ನ್ನು ಕಾರ್ಯರೂಪಕ್ಕೆ ತರಲು ಸರಕಾರದ ನಿರ್ದೇಶನದಂತೆ ಮುಂದಿನ ದಿನಗಳಲ್ಲಿ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

6. ಶೈಕ್ಷಣಿಕ ವರ್ಷ 2020-21ನೇ ಸಾಲಿನಲ್ಲಿ ಬಾಕಿ ಇರುವ ಪರೀಕ್ಷೆಗಳನ್ನು ರದ್ದುಪಡಿಸುವ ಬಗ್ಗೆ ಕೆಲವು ವಿದ್ಯಾರ್ಥಿಗಳಿಂದ ಮನವಿಗಳು ಬಂದಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸರಕಾರದ ನಿರ್ದೇಶನದಂತೆ, ಬಾಕಿ ಇರುವ ಎಲ್ಲಾ ಪದವಿ ಮತ್ತು ಸ್ನಾತಕೋತ್ತರ ಪರೀಕ್ಷೆಗಳನ್ನು ಆಗಸ್ಟ್ ತಿಂಗಳಲ್ಲಿ ನಡೆಸಲು ಕ್ರಮಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದಾಗ ಸಭೆಯು ಪರೀಕ್ಷೆಗಳನ್ನು ನಡೆಸಬಹುದೆಂಬುದಾಗಿ ತೀರ್ಮಾನಿಸಿತು. ಕೋವಿಡ್-19ರ ಹಿನ್ನೆಲೆಯಲ್ಲಿ ಈ ಹಿಂದೆ 2019-20 ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ಪರೀಕ್ಷಾ ಸಂಬಂಧ ಕೈಗೊಂಡಿರುವ ಎಲ್ಲಾ ಮಾರ್ಗಸೂಚಿಗಳನ್ನು ಈ ಪರೀಕ್ಷೆಗೂ ಅನ್ವಯಿಸಲಾಗುವುದೆಂದು ತಿಳಿಸಿದರು.

7. ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿ ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಸ್ವಾಯತ್ತ ಕಾಲೇಜುಗಳು ಕಡ್ಡಾಯವಾಗಿ ಯು.ಜಿ.ಸಿ. ಮತ್ತು ವಿಶ್ವವಿದ್ಯಾನಿಲಯದ ಮಾರ್ಗಸೂಚಿಗಳನ್ನು ಪಾಲಿಸಬೇಕೆಂಬುದಾಗಿ ತಿಳಿಸಿದರು.

8. ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಮಟ್ಟದ ಬಿ.ಎ. ಕಾರ್ಯಕ್ರಮಗಳಲ್ಲಿ Innovative ಕೋರ್ಸುಗಳನ್ನು ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

9. ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ನಡೆಸಲಾಗುತ್ತಿರುವ ಸರ್ಟಿಫಿಕೇಟ್/ಡಿಪ್ಲೊಮಾ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಚಾರ ನೀಡುವಂತೆ ಎಲ್ಲಾ ಕಾಲೇಜುಗಳಿಗೆ ತಿಳಿಸುವ ಬಗ್ಗೆ ತಿಳಿಸಿದರು.

## I. ನಡವಳಿಗಳ ದೃಢೀಕರಣ

ದಿನಾಂಕ 23.04.2021ರಂದು ನಡೆದ 2021ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.

- **ದೃಢೀಕರಿಸಲಾಯಿತು-.**

II. **ಅನುಸರಣಾ ವರದಿಯ ಅನುಮೋದನೆ**

1. ದಿನಾಂಕ 04.03.2021ರಂದು ನಡೆದ 2021ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ
   **-ಅನುಮೋದಿಸಲಾಯಿತು-.**

2. ದಿನಾಂಕ 09.04.2021ರಂದು ನಡೆದ 2021ನೇ ಸಾಲಿನ ಪ್ರಥಮ ವಿಶೇಷ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

**-ಅನುಮೋದಿಸಲಾಯಿತು-.**

3. ದಿನಾಂಕ 09.04.2021ರಂದು ನಡೆದ 2021ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

**-ಅನುಮೋದಿಸಲಾಯಿತು-.**

III. **ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.**

| | |
|---|---|
| ಕಾರ್ಯಸೂಚಿ ಸಂಖ್ಯೆ: | ಎಸಿಸಿ : ಸಾ.ಸ.4:1(2021) |
| ವಿಷಯ: | ತುಳು ಭಾಷಾ ವಿಷಯಕ್ಕೆ ಸಂಯೋಜನಾ ಶುಲ್ಕ ನಿಗದಿಪಡಿಸುವ ಬಗ್ಗೆ. |
| ನಿರ್ಣಯ: | ಭಾಷಾ ವಿಷಯಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಎಲ್ಲಾ ಭಾಷಾ ವಿಷಯಗಳಿಗೆ ಸಂಯೋಜನಾ ಶುಲ್ಕವನ್ನು ರೂ.5,000.00(ರೂಪಾಯಿ ಐದು ಸಾವಿರ ಮಾತ್ರ) ನಿಗದಿಪಡಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಎಸಿಸಿ : ಸಾ.ಸ.4:2(2021) |
| ವಿಷಯ: | ಶೈಕ್ಷಣಿಕ ವರ್ಷ 2021-22ನೇ ಸಾಲಿಗೆ ಹೊಸ/ವಿಸ್ತರಣಾ/ಮುಂದುವರಿಕೆ/ ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆಯ ನವೀಕರಣ ಮಂಜೂರು ಮಾಡುವ ಬಗ್ಗೆ ಕಾಲೇಜುಗಳ/ವಿದ್ಯಾಸಂಸ್ಥೆಗಳ ಪರಿಶೀಲನೆಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಬಗ್ಗೆ. |
| ನಿರ್ಣಯ: | ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು. |

ಈ ಕೆಳಗಿನ ಸದಸ್ಯರುಗಳು ಮಾತ್ರ ಸಮಿತಿಗೆ ತಮ್ಮನ್ನು ಅಧ್ಯಕ್ಷರನ್ನಾಗಿ ನೇಮಿಸಲು ಒಪ್ಪಿಗೆ ಸೂಚಿಸಿದರು. ಉಳಿದ ಸದಸ್ಯರುಗಳು ಸ್ಥಳೀಯ ವಿಚಾರಣಾ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸಲು ತಮ್ಮ ಒಪ್ಪಿಗೆ ಇರುವುದಿಲ್ಲ ಎಂಬುದಾಗಿ ತಿಳಿಸಿದರು.

1. ಶ್ರೀ ಕೆ. ರಮೇಶ
2. ಶ್ರೀ ರವಿಚಂದ್ರ ಪಿ. ಎಂ.
3. ಡಾ. ಎನ್. ಪಿ. ನಾರಾಯಣ ಶೆಟ್ಟಿ

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.4:3(2021)

ವಿಷಯ: ಡಾ. ಅರಬಿ ಯು., ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ ಇವರ ಅಮಾನತು - ಜೀವನಾಧಾರ ಭತ್ಯೆ ಮಂಜೂರು ಮಾಡಿದ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.4:4(2021)

ವಿಷಯ: ತಾತ್ಕಾಲಿಕ ನೆಲೆಯಲ್ಲಿ ಸಿಬ್ಬಂದಿಗಳ ಸೇವೆಯನ್ನು ಬಳಸಿಕೊಳ್ಳಲು ಅನುಮತಿ ನೀಡಿದ ಹಾಗೂ ಸಂಭಾವನೆ ನಿಗದಿಪಡಿಸಿದ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಮುಂದುವರಿದು, ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ತಾತ್ಕಾಲಿಕ ಸಿಬ್ಬಂದಿಗಳನ್ನು ನಿಯಮಾನುಸಾರ (ಪಾರದರ್ಶಕ ಕಾಯಿದೆ ಮೂಲಕ) ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಸದರಿ ನೇಮಕಾತಿಯನ್ನು ಮಾಡುವಾಗ ಜಾರಿಯಲ್ಲಿರುವ ಎಲ್ಲಾ ಕಾರ್ಮಿಕ ಕಲ್ಯಾಣ ಸೌಲಭ್ಯಗಳನ್ನು ಕಲ್ಪಿಸಬೇಕೆಂಬುದಾಗಿಯೂ ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.4:5(2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳ ಪ್ರಾಧ್ಯಾಪಕರುಗಳ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುವುದಕ್ಕೆ ಸಂಬಂಧಿಸಿ ಸ್ವೀಕೃತವಾದ ಆಕ್ಷೇಪಣೆಗಳಿಗೆ ಪಡೆದ ಕಾನೂನು ಅಭಿಪ್ರಾಯಗಳ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಇಬ್ಬರು

ನ್ಯಾಯವಾದಿಗಳು ನೀಡಿರುವ ಕಾನೂನು ಅಭಿಪ್ರಾಯಗಳನ್ನು ಪರಿಶೀಲಿಸಲಾಯಿತು. ಅಂತಿಮವಾಗಿ ಶ್ರೀ ಟಿ. ಪಿ. ರಾಜೇಂದ್ರ ಕುಮಾರ್ ಸುಂಗೆ ಇವರು ನೀಡಿರುವ ಕಾನೂನು ಅಭಿಪ್ರಾಯದಂತೆ ಕ್ರಮಕೈಗೊಳ್ಳಲು ಸಿಂಡಿಕೇಟು ನಿರ್ಣಯಿಸಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ : ಸಾ.ಸ.4:6(2021) |
| ವಿಷಯ: | ಪ್ರೊ. ಜಿ.ಕೆ. ನಾಗರಾಜ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಹುದ್ದೆ ರಹಿತವಾಗಿ ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ನಿಯೋಜನೆ ಮೇರೆಗೆ ವರ್ಗಾವಣೆ ಮಾಡುವ ಬಗ್ಗೆ |
| ನಿರ್ಣಯ: | ಘಟನೋತ್ತರವಾಗಿ ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ : ಸಾ.ಸ.4:7(2021) |
| ವಿಷಯ: | ಕು. ವನಿತಾ ಟಿ., ದ್ವಿತೀಯ ದರ್ಜೆ ಸಹಾಯಕರು, ಹಣಕಾಸು ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ಪರಿವೀಕ್ಷಣಾ ಅವಧಿಯನ್ನು ಘೋಷಿಸುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಾರ್ವತ್ರಿಕ : ಸಾ.ಸ.4:8(2021) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಆವರಣ, ಮಂಗಳಗಂಗೋತ್ರಿ, ಘಟಕ ಕಾಲೇಜುಗಳು ಹಾಗೂ ಸ್ನಾತಕೋತ್ತರ ಕೇಂದ್ರ, ಜ್ಞಾನ ಕಾವೇರಿ, ಚಿಕ್ಕ ಅಳುವಾರ ಇಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಭದ್ರತಾ, ಶುಚಿತ್ವ, ತೋಟಗಾರಿಕಾ ಹಾಗೂ 'ಡಿ' ಗ್ರೂಪ್ ಸಿಬ್ಬಂದಿಗಳ ಸೇವೆಯ ಗುತ್ತಿಗೆಯನ್ನು ವಹಿಸಿಕೊಂಡಿರುವ M/s Sri Ranganatha Enterprises, Mysuru ಸಂಸ್ಥೆಯ ಗುತ್ತಿಗೆ ಅವಧಿ ಮುಗಿದಿದ್ದು, ಹೊಸ ಗುತ್ತಿಗೆದಾರರ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಸದ್ರಿಯವರ ಗುತ್ತಿಗೆ ಅವಧಿ ವಿಸ್ತರಣೆ ಮಾಡುವ ಬಗ್ಗೆ. |
| ನಿರ್ಣಯ: | ಟೆಂಡರು ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ M/s Sri Ranganatha Enterprises, Mysuru ಇವರಿಗೆ ಗುತ್ತಿಗೆ ಅವಧಿಯನ್ನು ಈ ಹಿಂದೆ ಮಂಜೂರಾದ ದರ ಮತ್ತು ಷರತ್ತಿನೊಂದಿಗೆ ದಿನಾಂಕ 01.04.2021ರಿಂದ |

ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ವಿಸ್ತರಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ : ಸಾ.ಸ.4:9(2021) |
| ವಿಷಯ: | 2020-21ನೇ ಸಾಲಿನ ಪ್ರಥಮ ಮತ್ತು ದ್ವಿತೀಯ ಪದವಿ ತರಗತಿಗಳಿಗೆ ಪ್ರಸಾರಾಂಗದ ಮೂಲಕ ಪಠ್ಯಪುಸ್ತಕ ಮುದ್ರಿಸಿ ಪ್ರಕಟಿಸುವ ಪ್ರಸ್ತಾವನೆ ಬಗ್ಗೆ |
| ನಿರ್ಣಯ: | ಘಟನೋತ್ತರವಾಗಿ ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ : ಸಾ.ಸ.4:10(2021) |
| ವಿಷಯ: | ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ NME-ICT ಯೋಜನೆಯಡಿ ಭಾರತ ಸಂಚಾರ ನಿಗಮ ಲಿ., (BSNL) ನಿಂದ ಪಡೆದ 1Gbps Internet Connectivity ಶುಲ್ಕ ಪಾವತಿ ಬಗ್ಗೆ. |
| ನಿರ್ಣಯ: | ಘಟನೋತ್ತರವಾಗಿ ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ : ಸಾ.ಸ.4:11(2021) |
| ವಿಷಯ: | NMR Instrumentation Centre ನಲ್ಲಿರುವ NMR ಉಪಕರಣಕ್ಕೆ ಲಿಕ್ವಿಡ್ ಹೀಲಿಯಂ ಫಿಲ್ಲಿಂಗ್ ಕಾಂಟ್ರಾಕ್ಟ್ ಪ್ರಸ್ತಾವನೆ ಮಂಜೂರಾತಿ ಬಗ್ಗೆ. |
| ನಿರ್ಣಯ: | ಘಟನೋತ್ತರವಾಗಿ ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು: ಸಾ.ಸ.4:12(2021) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ. |
| ನಿರ್ಣಯ: | ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು: ಸಾ.ಸ.4:13(2021) |
| ವಿಷಯ: | ಪದವಿ ಮಟ್ಟದ ಬಿ.ಎಸ್ಸಿ. (ಹಾಸ್ಪಿಟಾಲಿಟಿ ಸೈನ್ಸ್) ಅಧ್ಯಯನ ಮಂಡಳಿಯ ಪುನರ್ ರಚನೆಯ ಬಗ್ಗೆ. |
| ನಿರ್ಣಯ: | ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು: ಸಾ.ಸ.4:14(2021) |
| ವಿಷಯ: | ಸ್ನಾತಕೋತ್ತರ ಮೆಡಿಕಲ್ ಫಿಸಿಕ್ಸ್ ಅಧ್ಯಯನ ಮಂಡಳಿಯ ಪುನರ್ ರಚನೆಯ ಬಗ್ಗೆ. |
| ನಿರ್ಣಯ: | ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು: ಸಾ.ಸ.4:15(2021) |
| ವಿಷಯ: | ಪದವಿ ಮಟ್ಟದ ಮಾನವ ಸಂಪನ್ಮೂಲ ಅಭಿವೃದ್ಧಿ B.A.(H.R.D.) ಅಧ್ಯಯನ ಮಂಡಳಿಯ ಪುನರ್ ರಚನೆಯ ಬಗ್ಗೆ. |
| ನಿರ್ಣಯ: | ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಪರೀಕ್ಷಾಂಗ : ಸಾ.ಸ.4:16(2021) |
| ವಿಷಯ: | National Academic Depository (NAD)ಗೆ ದತ್ತಾಂಶ ಒದಗಿಸಲು Electronic Document Generation System (EDGS) ತಂತ್ರಾಂಶವನ್ನು ಮಂಗಳೂರು ವಿಶ್ವವಿದ್ಯಾನಿಲಯವು ಅನುಸ್ಥಾನಗೊಳಿಸುವಂತೆ KEONICS ಸಂಸ್ಥೆ ನೀಡಿರುವ ಪ್ರಸ್ತಾವನೆ ಬಗ್ಗೆ. |
| ನಿರ್ಣಯ: | ಕುಲಸಚಿವರು (ಪರೀಕ್ಷಾಂಗ) ಇವರು ಪ್ರಸ್ತಾವನೆಯ ಬಗ್ಗೆ ವಿಸ್ತೃತ ವಿವರಣೆಗಳನ್ನು ಸಭೆಗೆ ನೀಡಿದರು. ಪ್ರಸ್ತುತ NADಗೆ ಸಲ್ಲಿಸಬೇಕಾಗಿರುವ ವಿದ್ಯಾರ್ಥಿ ದತ್ತಾಂಶವನ್ನು ವಿದ್ಯಾರ್ಥಿಗಳಿಗೆ ಯಾವುದೇ ಹೆಚ್ಚುವರಿ ಆರ್ಥಿಕ ಹೊರೆಯಿಲ್ಲದಂತೆ ಸಲ್ಲಿಸಲು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಕ್ರಮಕೈಗೊಳ್ಳಲಾಗಿರುವುದರಿಂದ ಪ್ರಸ್ತಾವನೆಯನ್ನು ಕೈಬಿಡಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಾರ್ವತ್ರಿಕ : ಸಾ.ಸ.4:17(2021) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗದ ಪ್ರಯೋಗಾಲಯದಲ್ಲಿ ನಡೆದ ಘಟನೆ ಬಗ್ಗೆ. |
| ನಿರ್ಣಯ: | ಸಮಿತಿಯ ವರದಿಯನ್ನು ಪರಿಗಣಿಸಲಾಯಿತು.<br>ಈ ಸಂಬಂಧ ಕುಲಪತಿಯವರ ಪರಿಹಾರ ನಿಧಿಯಿಂದ ಸದರಿ ವಿದ್ಯಾರ್ಥಿನಿಗೆ ತಗಲಿದ ವೈದ್ಯಕೀಯ ವೆಚ್ಚ ಭರಿಸಲು ಹಣ ಮಂಜೂರು ಮಾಡಲಾಗಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು. |

ಕಾರ್ಯಸೂಚಿ ಸಂಖ್ಯೆ: ಪ.ಜಾ.ಪ.ಪಂ.ಘಟಕ : ಸಾ.ಸ.4:18(2021)

ವಿಷಯ: ಪರಿಶಿಷ್ಟ ಜಾತಿ/ಪಂಗಡದ ದ್ವಿತೀಯ ವರ್ಷದ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ವಿತರಿಸಲು ಲ್ಯಾಪ್‌ಟಾಪ್ ಖರೀದಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಈಗಾಗಲೇ ಪದವಿ ಮುಗಿಸಿರುವ ಪರಿಶಿಷ್ಟ ಜಾತಿ / ಪಂಗಡದ ವಿದ್ಯಾರ್ಥಿಗಳಿಗೆ ನೀಡಲು ಬಾಕಿಯಿರುವ ಲ್ಯಾಪ್‌ಟಾಪ್‌ಗಳನ್ನು ಪ್ರಥಮ ಹಂತದಲ್ಲಿ ವಿತರಿಸಿ, ನಂತರ ಪ್ರಸ್ತುತ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್, ಘಟಕ ಕಾಲೇಜುಗಳು ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ / ಪಂಗಡದ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ವಿತರಿಸಲು ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ವೆಚ್ಚವನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಬಹುದೆಂಬುದಾಗಿ ನಿರ್ಣಯಿಸಲಾಯಿತು. ಮುಂಬರುವ ದಿನಗಳಲ್ಲಿ ಸರಕಾರದಿಂದ ಮಂಜೂರಾಗುವ SCP-TSP ಯೋಜನೆಯಡಿ ಬಿಡುಗಡೆಯಾಗುವ ಅನುದಾನವನ್ನು ಸದರಿ ಮೊತ್ತಕ್ಕೆ ಹೊಂದಾಣಿಕೆ ಮಾಡುವ ಷರತ್ತಿನ ಮೇರೆಗೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪ.ಜಾ.ಪ.ಪಂ.ಘಟಕ : ಸಾ.ಸ.4:19(2021)

ವಿಷಯ: ಸರಕಾರದಿಂದ ಬರಬೇಕಾದ ಹೆಚ್ಚುವರಿ ಭೋಜನ ವೆಚ್ಚವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಆಂತರಿಕ ನಿಧಿ ಅಥವಾ SCP-TSP ಯೋಜನೆಯಡಿ ಬಿಡುಗಡೆಯಾಗುವ ಅನುದಾನದಿಂದ ಹೊಂದಾಣಿಕೆ ಮಾಡುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಮುಂಬರುವ ದಿನಗಳಲ್ಲಿ ಸರಕಾರದಿಂದ ಮಂಜೂರಾಗುವ SCP-TSP ಯೋಜನೆಯಡಿ ಬಿಡುಗಡೆಯಾಗುವ ಅನುದಾನವನ್ನು ಸದರಿ ಮೊತ್ತಕ್ಕೆ ಹೊಂದಾಣಿಕೆ ಮಾಡುವ ಷರತ್ತಿನ ಮೇರೆಗೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಆಡಳಿತ : ಸಾ.ಸ.4:20(2021) |
| ವಿಷಯ: | ಕುಲಸಚಿವರ ಕಚೇರಿಯ ಆಡಳಿತ ವಿಭಾಗಕ್ಕೆ ಡುಪ್ಲೋ ಯಂತ್ರ ಖರೀದಿಸುವ ಬಗ್ಗೆ. |
| ನಿರ್ಣಯ: | ದಿನಾಂಕ 11.06.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಆಡಳಿತ : ಸಾ.ಸ.4:21(2021) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕಛೇರಿ/ ವಿಭಾಗಗಳ ಕಂಪ್ಯೂಟರ್ / ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಯ ಬಗ್ಗೆ. |
| ನಿರ್ಣಯ: | Tender Technical Scrutiny Committee ಗೆ ಮರು ಸಲ್ಲಿಸಿ ವರದಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ : ಸಾ.ಸ.4:22(2021) |
| ವಿಷಯ: | "The Centre for Advanced Research in Environmental Radioactivity (CARER)" ಚಿನ್ನದ ಪದಕದ ಅರ್ಹತೆಗೆ ತಿದ್ದುಪಡಿ ಮಾಡುವ ಬಗ್ಗೆ. |
| ನಿರ್ಣಯ: | ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗದಿಂದ ಈ ಬಗ್ಗೆ ನಿರಾಪೇಕ್ಷಣಾ ಪತ್ರವನ್ನು ಪಡೆದುಕೊಂಡು ಮುಂದಿನ ಕ್ರಮಕೈಗೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ : ಸಾ.ಸ. 4:23 (2021) |
| ವಿಷಯ: | 2021-22ನೇ ಸಾಲಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಇಂಟರ್ನೆಟ್ ಲೀಸ್ಡ್ ಲೈನ್ 500 Mbps ಸಂಪರ್ಕದ ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ಮಂಜೂರಾತಿ ನೀಡುವ ಪ್ರಸ್ತಾವನೆ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ : ಸಾ.ಸ.4:24(2021) |
| ವಿಷಯ: | ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗಕ್ಕೆ ಟ್ರೆಡ್‌ಮಿಲ್ ಉಪಕರಣವನ್ನು (Buyback) ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ. |
| ನಿರ್ಣಯ: | ದಿನಾಂಕ 11.06.2021ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ : ಸಾ.ಸ.4:25(2021) |
| ವಿಷಯ: | ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರಿನ ಆವರಣದಲ್ಲಿ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಕೊಡಮಾಡಿರುವ ಕಾಮಗಾರಿಗೆ ಸಂಬಂಧಿಸಿದ ಕೊರತೆ ಮೊತ್ತ ಭರಿಸಿಕೊಡಲು ಕಾಲೇಜಿನ 150ನೇ ವರ್ಷಾಚರಣೆಯಲ್ಲಿ ಸಂಗ್ರಹಿಸಲಾದ ಉಳಿಕೆ ಮೊತ್ತದಿಂದ ಪಾವತಿಸಲು ಮಂಜೂರಾತಿ ನೀಡುವ ಪ್ರಸ್ತಾವನೆ ಬಗ್ಗೆ. |
| ನಿರ್ಣಯ: | ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು. |
| ಕಾರ್ಯಸೂಚಿ ಸಂಖ್ಯೆ: | ಡಿಇವಿ : ಸಾ.ಸ.4:26(2021) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ Smart Class Room ಸೌಲಭ್ಯ ಅಳವಡಿಸುವ ಬಗ್ಗೆ |
| ನಿರ್ಣಯ: | ಅನುಮೋದಿಸಲಾಯಿತು. |
| ಕಾರ್ಯಸೂಚಿ ಸಂಖ್ಯೆ: | ಸಾ.ಸ.4:27(2021) |
| ವಿಷಯ: | ಡಾ. ಗೀತಾಂಜಲಿ ಪಿ.ಎ., ಸಹಾಯಕ ಪ್ರಾಧ್ಯಾಪಕರು, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರು ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ಅಪೀಲು ಸಂಖ್ಯೆ 751/2020ಗೆ ಸಂಬಂಧಿಸಿ ನ್ಯಾಯಾಲಯವು ದಿನಾಂಕ 01.04.2021ರಂದು ನೀಡಿರುವ ತೀರ್ಪಿನ ಬಗ್ಗೆ ಹಾಗೂ ಡಾ. ಗೀತಾಂಜಲಿ ಪಿ.ಎ. ಇವರಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಲ್ಲಿ ಸಹಾಯಕ ಪ್ರಾಧ್ಯಾಪಕ ಹಂತ 1 ರಿಂದ ಹಂತ 2ಕ್ಕೆ ಪದೋನ್ನತಿ ನೀಡುವ ಬಗ್ಗೆ. |
| ನಿರ್ಣಯ: | ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿ, ಸದರಿಯವರಿಂದ ಮುಚ್ಚಳಿಕೆಯನ್ನು ಪಡೆದುಕೊಂಡು ಪದೋನ್ನತಿಯ ಬಗ್ಗೆ ಸ್ಕ್ರೀನಿಂಗ್-ಕಂ-ಇವಾಲ್ಯುವೇಶನ್ ಸಮಿತಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು. |
| ಕಾರ್ಯಸೂಚಿ ಸಂಖ್ಯೆ: | ಡಿಇವಿ : ಸಾ.ಸ.4:28(2021) |
| ವಿಷಯ: | Centre for Water Resources Development and Management (CWRDM), Kunnamangalam, Kozhikode ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ : ಸಾ.ಸ.4:29(2021) |
| ವಿಷಯ: | ಮೆ. ಕ್ಯಾಂಪಸ್ ಮ್ಯಾನೇಜ್‌ಮೆಂಟ್ ಸಂಸ್ಥೆಯು ಶೈಕ್ಷಣಿಕ ವಿಭಾಗಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆ ಬಗ್ಗೆ ನೀಡಿರುವ ಮಾಹಿತಿ. |
| ನಿರ್ಣಯ: | ವಿಸ್ತೃತ ಮಾಹಿತಿಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು. ಕ್ಯಾಂಪಸ್ ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್‌ಗೆ ಸಂಬಂಧಿಸಿ, ತಾಂತ್ರಿಕ ಪ್ರಗತಿಯ ಮಾಹಿತಿಗಳೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ : ಸಾ.ಸ.4:30(2021) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿರುವ ವಿವಿಧ ಅಧ್ಯಯನ ಪೀಠಗಳ ಚಟುವಟಿಕೆಗಳನ್ನು ನಡೆಸುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು.<br>ಮುಂದುವರಿದು, ಎಲ್ಲಾ ಪೀಠಗಳ ಸಂಯೋಜಕರು ಮತ್ತು ಕಚೇರಿ ಸಿಬ್ಬಂದಿಗಳ ಸಭೆಯನ್ನು ಕರೆದು ಸಂಬಂಧಪಟ್ಟ ಪೀಠಗಳ ಪರಿನಿಯಮಗಳ ತಿದ್ದುಪಡಿಗಳ ಅಗತ್ಯವಿದ್ದರೆ ಈ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಆಡಳಿತ : ಸಾ.ಸ.4:31(2021) |
| ವಿಷಯ: | ಕಣಚೂರು ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ, ವಿಶ್ವವಿದ್ಯಾನಿಲಯ ರಸ್ತೆ, ನಾಟೆಕಲ್, ಮಂಗಳೂರು-575018 ಈ ಆಸ್ಪತ್ರೆಯನ್ನು ವೈದ್ಯಕೀಯ ವೆಚ್ಚ ಮರುಭರಣೆಗೆ ಮಂಗಳೂರು ವಿಶ್ವವಿದ್ಯಾನಿಲಯ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ : ಸಾ.ಸ.4:32(2021) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿ.ವಿ., ಬಯೋಮೆಟ್ರಿಕ್ಸ್ ಹಾಗೂ ಸೋಲಾರ್ ಉಪಕರಣಗಳ ಪ್ರಕ್ರಿಯೆ ಮತ್ತು ಕಾರ್ಯಕ್ಷಮತೆಯ ವೈಫಲ್ಯತೆ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳುವ ಕುರಿತು. |
| ನಿರ್ಣಯ: | ಘನತೆವೆತ್ತ ರಾಜ್ಯಪಾಲರ ಕಛೇರಿಗೆ ದಿನಾಂಕ 12.03.2021 ರಂದು ಬರೆಯಲಾದ ಪತ್ರ ಮತ್ತು ದಿನಾಂಕ 10.05.2021 ಘನತೆವೆತ್ತ ರಾಜ್ಯಪಾಲರ |

ಕಚೇರಿಯಿಂದ ಸ್ವೀಕೃತವಾದ ಪತ್ರ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಆಂತರಿಕ ಪರಿಶೀಲನಾ ಸಮಿತಿಯು ಸಲ್ಲಿಸಿರುವ ವರದಿಯ ಆಧಾರದಲ್ಲಿ, ಪ್ರಕರಣದ ಬಗ್ಗೆ ನಿವೃತ್ತ ನ್ಯಾಯಾಧೀಶರಿಂದ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಅನುಮತಿ ಕೋರಿ ರಾಜ್ಯ ಸರಕಾರಕ್ಕೆ ಪತ್ರ ಬರೆಯಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಕಾನೂನು ಘಟಕ : ಸಾ.ಸ.4:33(2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ದಾಖಲೆಗಳಲ್ಲಿ ತಮ್ಮ ಹೆಸರನ್ನು ಶ್ವೇತಾ ಕಾಮತ್ ಕೆ.ಹೆಚ್. ಎಂಬುದರ ಬದಲಾಗಿ ಮನ್ವಿತ ಕಾಮತ್ ಎಂದು ಬದಲಾಯಿಸುವಂತೆ ಸಿಟಿ ಸಿವಿಲ್ ಹಾಗೂ ಸೆಶನ್ಸ್ ನ್ಯಾಯಾಧೀಶರ ನ್ಯಾಯಾಲಯ ಬೆಂಗಳೂರು ಇಲ್ಲಿ ಶ್ವೇತಾ ಕಾಮತ್ ಕೆ.ಹೆಚ್. ಇವರು ಹೂಡಿರುವ ದಾವೆ (O.S.No. 237/2021)

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಕಾನೂನು ಘಟಕ : ಸಾ.ಸ.4:34(2021)

ವಿಷಯ: ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಡಾ. ಜಯಶಂಕರ್ ಎಂ., ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಇವರು ಹೂಡಿರುವ (ರಿಟ್ ಅರ್ಜಿ ಸಂಖ್ಯೆ 8240/2021 ಎಸ್ಆರ್ಇಎಸ್)ಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಪರವಾಗಿ ನ್ಯಾಯಾಲಯದಲ್ಲಿ ಹೂಡಲಾಗಿರುವ ಆಕ್ಷೇಪಣಾ ಹೇಳಿಕೆಗಳಿಗೆ ಘಟನೋತ್ತರ ಅನುಮೋದನೆ ಪಡೆಯುವ ಬಗ್ಗೆ.

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಕಾನೂನು ಘಟಕ : ಸಾ.ಸ.4:35(2021)

ವಿಷಯ: ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಡಾ. ಐರಾನಿ ಮೊಹಮ್ಮದ್ ಖಾನ್, ಪ್ರಾಧ್ಯಾಪಕರು, ಸ್ನಾತಕೋತ್ತರ ಇಲೆಕ್ಟ್ರಾನಿಕ್ಸ್ ವಿಭಾಗ, ಇವರು ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ 8287/2021 (ಎಸ್ಆರ್ಇಎಸ್)ಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಪರವಾಗಿ ನ್ಯಾಯಾಲಯದಲ್ಲಿ ಹೂಡಲಾಗಿರುವ ಆಕ್ಷೇಪಣಾ ಹೇಳಿಕೆಗಳಿಗೆ ಘಟನೋತ್ತರ ಅನುಮೋದನೆ ಪಡೆಯುವ ಬಗ್ಗೆ.

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು: ಸಾ.ಸ.4:36(2021) |
| ವಿಷಯ: | ಸ್ನಾತಕೋತ್ತರ ಸಂಖ್ಯಾಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ ರಚನೆಯ ಬಗ್ಗೆ. |
| ನಿರ್ಣಯ: | ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಇಡಿ: ಸಾ.ಸ.4:37(2021) |
| ವಿಷಯ: | Construction of Ladies Hostel for SC/ST Students under AICTE – CAFES Scheme at Mangalore University Campus, Mangalagangothri. Estimate Amount ₹ 450.00 lakhs |
| ನಿರ್ಣಯ: | ದಿನಾಂಕ 13.7.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.<br>ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಇಡಿ: ಸಾ.ಸ.4:38(2021) |
| ವಿಷಯ: | ಫೀ.ಮಾ.ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿಯ ನಿವೇಶನಕ್ಕೆ ಆವರಣ ಗೋಡೆ ನಿರ್ಮಿಸುವ ಕಾಮಗಾರಿ.  ಅಂದಾಜು ಪಟ್ಟಿ ಮೊತ್ತ ರೂ. 93.00 ಲಕ್ಷಗಳು. |
| ನಿರ್ಣಯ: | ದಿನಾಂಕ 13.7.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.<br>ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಇಡಿ: ಸಾ.ಸ.4:39(2021) |
| ವಿಷಯ: | ರೂಸಾ ಅನುದಾನದಡಿ ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಉದ್ಯೋಗ ಮಾಹಿತಿ ಕೇಂದ್ರ ಕಟ್ಟಡದ ಮೊದಲನೇ ಅಂತಸ್ತಿನಲ್ಲಿ ಪರಿಸರ ವಿಜ್ಞಾನ ವಿಭಾಗ ಕಟ್ಟಡದ ನಿರ್ಮಾಣ ಕಾಮಗಾರಿ - (1 ನೇ ಹಂತ) ಮೊದಲ |

| | |
|---|---|
| | ಅಂತಸ್ತಿನ ಉಳಿಕೆ ಕಟ್ಟಡವನ್ನು ಪೂರ್ಣಗೊಳಿಸುವ ಬಗ್ಗೆ - ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಅಂಶಗಳಿಗೆ (Variations) ಅನುಮೋದನೆ ನೀಡುವ ಕುರಿತು. |
| ನಿರ್ಣಯ: | ದಿನಾಂಕ 13.7.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.<br>ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |
| ಕಾರ್ಯಸೂಚಿ ಸಂಖ್ಯೆ: | ಇಡಿ: ಸಾ.ಸ.4:40(2021) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಮಂಜೂರಾತಿಗೊಂಡ ರೂ. 5.00 ಲಕ್ಷ ಮೊತ್ತ ಮೀರಿದ ಟೆಂಡರ್ ಕಾಮಗಾರಿಗಳಿಗೆ ಅನುಮೋದನೆ ನೀಡುವ ಬಗ್ಗೆ. |
| ನಿರ್ಣಯ: | ದಿನಾಂಕ 13.7.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.<br>ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |
| ಕಾರ್ಯಸೂಚಿ ಸಂಖ್ಯೆ: | ಇಡಿ: ಸಾ.ಸ.4:41(2021) |
| ವಿಷಯ: | Providing Architectural Consultancy for the Construction of Various Major buildings at Belapu Mangalore University, Mangalagangothri ಸಲಹೆಗಾರರಿಗೆ 2ನೇ ಭಾಗಶ: ಬಿಲ್ಲು ಪಾವತಿಸುವ ಬಗ್ಗೆ. |
| ನಿರ್ಣಯ: | ದಿನಾಂಕ 13.7.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.<br>ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.4:42(2021)

ವಿಷಯ: ಡಾ. ಎಂ. ಜಯಶಂಕರ್, ಸೂಕ್ಷ್ಮಾಣುಜೀವವಿಜ್ಞಾನದ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿದ ಹಾಗೂ ಇಲಾಖಾ ವಿಚಾರಣೆಯ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದೂಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.4:43(2021)

ವಿಷಯ: ತಾತ್ಕಾಲಿಕ ನೆಲೆಯಲ್ಲಿ ಸೇವೆಗೈದು 2005ರಲ್ಲಿ ಖಾಯಂಗೊಂಡ ಸಿಬ್ಬಂದಿಗಳು ಸಲ್ಲಿಸಿರುವ ಮನವಿ ಹಾಗೂ ಈ ಬಗ್ಗೆ ಸದರಿ ಸಿಬ್ಬಂದಿಗಳು ಮಾನ್ಯ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ 2314/2021ರ ಮಧ್ಯಂತರ ಆದೇಶದ ಬಗ್ಗೆ.

ನಿರ್ಣಯ: ದಿನಾಂಕ 26.03.2018 ರಂದು ಸಿಂಡಿಕೇಟ್ ಸಭೆಯು ಕೈಗೊಂಡಿದ್ದ ನಿರ್ಣಯವು ಕಾನೂನು ಬಾಹಿರವಾಗಿದ್ದು, ಅದರಿಂದಾಗಿ, ವಿಶವಿದ್ಯಾನಿಲಯದ ಸಿಬ್ಬಂದಿಗಳ ನ್ಯಾಯಯುತ ಹಾಗೂ ಸಾಂವಿಧಾನಿಕ ಹಕ್ಕುಗಳ ಗಂಭೀರ ಉಲ್ಲಂಘನೆಗೆ ಕಾರಣವಾಗಿರುವುದರಿಂದ ಸದರಿ ನಿರ್ಣಯವನ್ನು ರದ್ದುಪಡಿಸಿ, ದಿನಾಂಕ 30.09.2014 ರಂದು ಕೈಗೊಂಡ ನಿರ್ಣಯವನ್ನು ಮರುಸ್ಥಾಪಿಸಲು ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು. ಮುಂದುವರಿದು, ಸದರಿ ನೌಕರರನ್ನು ಸೇವೆಗೆ ಸೇರಿದ ದಿನಾಂಕದಿಂದಲೇ ಖಾಯಾಮಾತಿ ಮಾಡಿ ಸೇವಾ ಹಿರಿತನದ ಹಕ್ಕನ್ನು ಸಹ ನೀಡಿ ಮುಂಭಡ್ತಿಯನ್ನು ಸಹ ನೀಡಬೇಕು. ಹಾಗೂ ಎಲ್ಲಾ ಸೇವಾ ಸೌಲಭ್ಯಗಳನ್ನು ತಕ್ಷಣವೇ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲು ಸಹ ತೀರ್ಮಾನಿಸಲಾಯಿತು. ಅಲ್ಲದೆ, ಈಗಾಗಲೇ ನಿವೃತ್ತರಾಗಿರುವ ನೌಕರರಿಂದ ಕಡಿತಗೊಳಿಸಿರುವ ವೇತನ ಮತ್ತು ಸಕಲ ಸೇವಾ ಸೌಲಭ್ಯಗಳನ್ನು ಮೂವತ್ತು ದಿನಗಳೊಳಗಾಗಿ ಬಡ್ಡಿರಹಿತವಾಗಿ ಮರುಪಾವತಿ ಮಾಡಬೇಕು. ಮತ್ತು ಎಲ್ಲಾ ನಿವೃತ್ತರಿಗೂ ಸಹ ಎಲ್ಲಾ ರೀತಿಯ ಸೇವಾ ಸೌಲಭ್ಯಗಳನ್ನು ಕೆಲಸಕ್ಕೆ ನೇಮಕಾತಿಗೊಂಡ ದಿನಾಂಕದಿಂದಲೇ ಅನ್ವಯಿಸುವಂತೆ ಸಂಪೂರ್ಣವಾಗಿ ಪಾವತಿಸಬೇಕು. ಈ ನಿರ್ಣಯದನ್ವಯ ಕೈಗೊಂಡ ಎಲ್ಲಾ ಕ್ರಮದ ಕುರಿತು ಪಾಲನಾ ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ದಾಖಲೆ ಸಹಿತ ಮಂಡಿಸಬೇಕೆಂದು ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು. ಈ ನಿರ್ಣಯದ

ಅನುಸಾರವೇ ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿಯಿರುವ ಎಲ್ಲಾ ರಿಟ್ ಅರ್ಜಿ ಹಾಗೂ ವ್ಯಾಜ್ಯಗಳಲ್ಲಿ ವಿಶ್ವವಿದ್ಯಾನಿಲಯದ ಪರವಾಗಿ ಲಿಖಿತ ಹೇಳಿಕೆ ಅಥವಾ ಆಕ್ಷೇಪಣೆಯನ್ನು ಅರ್ಜಿ ಸಂಖ್ಯೆ 2314/2021 (S.Res) ಸಲ್ಲಿಸಿ ರಿಟ್‌ಅನ್ನು ಮುಕ್ತಾಯಗೊಳಿಸಿ, ಆ ಕುರಿತು ಸಹ ಪಾಲನಾ ವರದಿಯನ್ನು 15 ದಿನಗಳೊಳಗಾಗಿ ಸಿಂಡಿಕೇಟ್ ಮುಂದೆ ಸಲ್ಲಿಸಬೇಕು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು : ಸಾ.ಸ.4:44(2021)

ವಿಷಯ: ಪದವಿ ಮಟ್ಟದ ಮಲೆಯಾಳಂ, ತಮಿಳು, ತೆಲುಗು, ಉರ್ದು, ಅರೇಬಿಕ್ ಮತ್ತು ಮಣಿಪುರಿ ಭಾಷಾ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ ರಚನೆಯ ಬಗ್ಗೆ.

ನಿರ್ಣಯ: ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ : ಸಾ.ಸ.4:45(2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸುವ ಸಂಬಂಧ Task Force ಸಮಿತಿಯನ್ನು ಪರಿಷ್ಕರಿಸುವ ಬಗ್ಗೆ.

ನಿರ್ಣಯ: ಸರಕಾರದಿಂದ ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಮಾರ್ಗಸೂಚಿ ಸ್ವೀಕೃತವಾದ ನಂತರ ಸದರಿ ಸಮಿತಿಯ ಪುನರ್ ರಚನೆಯ ಬಗ್ಗೆ ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಇಡಿ : ಸಾ.ಸ.4:46(2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಅಧೀನಕ್ಕೊಳಪಟ್ಟ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಇಲ್ಲಿ ನಿರ್ಮಾಣಗೊಂಡಿರುವ ವಿಜ್ಞಾನ ವಿಭಾಗ ಕಟ್ಟಡದ (ಉತ್ತರ ಭಾಗ) - ಅಂತಿಮ ಹೆಚ್ಚುವರಿ ಪರಿಮಾಣ ಮೊತ್ತ (Excess Qty./Workslip), ಹೆಚ್ಚುವರಿ ಐಟಂ ಮೊತ್ತ (EIRL) ಹಾಗೂ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತ (Revised Estimate)ಕ್ಕೆ ಅನುಮೋದನೆ ನೀಡುವ ಬಗ್ಗೆ ಮರು ಮಂಡಿಸುವುದು.

ನಿರ್ಣಯ: ಅನುಮೋದಿಸಲಾಯಿತು.

ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಇಡಿ : ಸಾ.ಸ.4:47(2021) |
| ವಿಷಯ: | 03 ಟೆಂಡರು ಕಾಮಗಾರಿಗಳ ದರ ಸಂಧಾನೀಕರಣದ ಬಗ್ಗೆ |
| ನಿರ್ಣಯ: | ದಿನಾಂಕ 13.7.2021ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.<br>ಕಾಮಗಾರಿಗೆ ಸಂಬಂಧಿಸಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಣವನ್ನು ಕಾರ್ಯಕಾರಿ ಅಭಿಯಂತರರಿಂದ ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು : ಸಾ.ಸ.4:48(2021) |
| ವಿಷಯ: | ಡಾ.ಎನ್.ಪಿ.ನಾರಾಯಣ ಶೆಟ್ಟಿ, ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಮಂಗಳೂರು ವಿ.ವಿ.ಯ ಅಧೀನಕ್ಕೊಳಪಟ್ಟ ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳಿಗೆ ನಿಗದಿಪಡಿಸಿದ ಸಂಯೋಜನಾ ಮತ್ತು ಸೇವಾ ಶುಲ್ಕಗಳ ಬಗ್ಗೆ. |
| ನಿರ್ಣಯ: | ಪ್ರಸ್ತಾವನೆಯನ್ನು ಚರ್ಚಿಸಲಾಯಿತು.<br>ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜನಾ ಮತ್ತು ಸೇವಾ ಶುಲ್ಕಗಳ ಬಗ್ಗೆ ಪರಿಶೀಲಿಸಲು ಈ ಕೆಳಗಿನ ಸಮಿತಿಯನ್ನು ರಚಿಸಲಾಯಿತು.<br>ಪ್ರೊ. ಬಿ. ನಾರಾಯಣ, - ಅಧ್ಯಕ್ಷರು<br>ಹಣಕಾಸು ಅಧಿಕಾರಿ ಹಾಗೂ<br>ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನ ಶಾಸ್ತ್ರ<br>ಅಧ್ಯಯನ ವಿಭಾಗ<br>ಪ್ರೊ. ಉದಯ ಬಿ. - ಸದಸ್ಯರು<br>ಡಾ. ಎನ್. ಪಿ. ನಾರಾಯಣ ಶೆಟ್ಟಿ - ಸದಸ್ಯರು |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು : ಸಾ.ಸ.4:49(2021) |
| ವಿಷಯ: | ಶ್ರೀ ರಮೇಶ್ ಕೆ., ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ |
| ಪ್ರಸ್ತಾವನೆ 1. | ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು, ಹಂಪನಕಟ್ಟೆಯ ಕಾಲೇಜಿನಲ್ಲಿ 1937 ರಿಂದ 2007ರ ತನಕ ಕಾರ್ಯ ನಿರ್ವಹಿಸಿರುವ ವಿದ್ಯಾರ್ಥಿ ಸಹಕಾರ ಸಂಘವನ್ನು ಮುಚ್ಚಿರುವುದರಿಂದ ಇದನ್ನು ಕೂಡಲೇ ಮರು ಪ್ರಾರಂಭಿಸುವಂತೆ ನಿರ್ಣಯ ತೆಗೆದುಕೊಳ್ಳುವುದು. |
| ನಿರ್ಣಯ: | ಪ್ರಸ್ತಾವನೆಯನ್ನು ಚರ್ಚಿಸಲಾಯಿತು. |

ಸದರಿ ವಿಷಯಕ್ಕೆ ಸಂಬಂಧಿಸಿ ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರು ನೀಡಿರುವ ಉತ್ತರವು ಅಸಮರ್ಪಕ ಮತ್ತು ಅಸಮಂಜಸವೆಂದು ಸಿಂಡಿಕೇಟು ಪರಿಗಣಿಸಿತು. ಆದುದರಿಂದ ವಿದ್ಯಾರ್ಥಿ ಸಹಕಾರ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಪರಿಶೀಲಿಸಲು ಈ ಕೆಳಕಂಡ ಸಿಂಡಿಕೇಟು ಸದಸ್ಯರುಗಳ ಸಮಿತಿಯನ್ನು ರಚಿಸಲಾಯಿತು.

ಶ್ರೀ ರಮೇಶ್ ಕೆ., - ಅಧ್ಯಕ್ಷರು

ಶ್ರೀ ಮೋಹನ ಪಡಿವಾಳ್ - ಸದಸ್ಯರು

ಅಧಿಸೂಚನೆಯಲ್ಲಿ ಸಮಿತಿಯ ಕಾರ್ಯವ್ಯಾಪ್ತಿಯನ್ನು ನಿಗದಿಪಡಿವುದು.

ಪ್ರಸ್ತಾವನೆ 2. ಭಾರತದ ಸ್ವಾತಂತ್ರ್ಯೋವದ 75ನೇ ವರ್ಷದ ಅಮೃತ ಮಹೋತ್ಸವ ಸುಸಂದರ್ಭದಲ್ಲಿ ರಾಜಕೀಯಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರಾದ ಡಾ.ಪಿ.ಅನಂತಕೃಷ್ಣ ಭಟ್ ಬರೆದ ಕನ್ನಡ ಭಾಷೆಯ “ಭಾರತ ಸಂವಿಧಾನ ಮತ್ತು ಆಂಗ್ಲ ಭಾಷೆಯ “Indian Constitution” ಪುಸ್ತಕವನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜು, ಸ್ನಾತಕೋತ್ತರ ಕೇಂದ್ರ ಹಾಗೂ ವಿ.ವಿ. ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಯವರಿಗೆ ಸ್ಮರಣಿಕೆ ರೂಪದಲ್ಲಿ ವಿಶ್ವವಿದ್ಯಾನಿಲಯದ ಲಾಂಛನದೊಂದಿಗೆ ನೀಡುವಂತೆ ಚರ್ಚಿಸಿ ನಿರ್ಣಯಿಸುವುದು.

ನಿರ್ಣಯ: ಪ್ರಸ್ತಾವನೆಯನ್ನು ಚರ್ಚಿಸಲಾಯಿತು.

ಸದರಿ ವಿಷಯಕ್ಕೆ ಸಂಬಂಧಿಸಿ ಈ ಕೆಳಗಿನ ಸಮಿತಿಯನ್ನು ರಚಿಸಲಾಯಿತು.

ಪ್ರೊ. ಪಿ.ಎಲ್. ಧರ್ಮ, - ಅಧ್ಯಕ್ಷರು
ಕುಲಸಚಿವರು (ಪ), ಮತ್ತು ಪ್ರಾಧ್ಯಾಪಕರು,
ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ

ಡಾ. ಜಯರಾಜ್ ಅಮೀನ್, - ಸದಸ್ಯರು
ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ
ಅಧ್ಯಯನ ವಿಭಾಗ

ಡಾ. ಪರಿಣಿತ, - ಸದಸ್ಯರು
ಪ್ರಾಧ್ಯಾಪಕರು, ಸ್ನಾತಕೋತ್ತರ ಆಂಗ್ಲ ಅಧ್ಯಯನ ವಿಭಾಗ

ಡಾ. ಸೋಮಣ್ಣ, - ಸದಸ್ಯರು
ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ

ಕಾರ್ಯಸೂಚಿ ಸಂಖ್ಯೆ: ಎಸಿಸಿ : ಸಾ.ಸ.4:50(2021)

ವಿಷಯ: ಶೈಕ್ಷಣಿಕ ವರ್ಷ 2021-22ನೇ ಸಾಲಿಗೆ ಸ್ನಾತಕ ಕಾರ್ಯಕ್ರಮಗಳಿಗೆ ಪ್ರವೇಶಾತಿ ಮತ್ತು ಇತರ ಶುಲ್ಕಗಳನ್ನು ನಿಗದಿಪಡಿಸುವ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕ ಕಾರ್ಯಕ್ರಮಗಳಿಗೆ ಪ್ರವೇಶಾತಿ ಮತ್ತು ಇತರೆ ಶುಲ್ಕಗಳನ್ನು ಈ ಕೆಳಗಿನ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಉಳಿದಂತೆ ದಿನಾಂಕ 24.06.2021ರಂದು ನಡೆದ ಶುಲ್ಕ ಪರಿಷ್ಕರಣಾ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು.

I. **ಈ ಕೆಳಗಿನ ಶುಲ್ಕಗಳನ್ನು ಶೈಕ್ಷಣಿಕ ವರ್ಷ 2021-22ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ ಕೈಬಿಡುವುದು.**

ಅನುಬಂಧ - I - Details of fee to be charged for affiliated colleges UG Admission fee/Issue of various cerficates/Documents etc.,

10. Admission fee for UG Programme (except constituent colleges)

Other fees:

ii) Career Guidance fee - 200.00 (per student)

iii) Cultural activities fee - 300.00 (per student)

ಅನುಬಂಧ - II Admission fee for Constituent Colleges UG Programmes (Day)

30. Special fee:

| | | |
|---|---|---|
| B.A. degree - Tourism & Travel Management | Special fee | 1,850.00 |
| | Study Tour fee | 1,600.00 |

SC/ST/Category - I Students

22. Special fee:

| | | |
|---|---|---|
| B.A. degree - Tourism & Travel Management | Special fee | 1,100.00 |
| | Study Tour fee | 800.00 |

ಅನುಬಂಧ - III Admission fee for Constituent Colleges UG Programmes (Evening)

30. Special fee:

| | | |
|---|---|---|
| B.A. degree - Tourism & Travel Management | Special fee | 1,850.00 |
| | Study Tour fee | 1,600.00 |

SC/ST/Category - I Students

22. Special fee:

| | | |
|---|---|---|
| B.A. degree - Tourism & Travel Management | Special fee | 1,100.00 |
| | Study Tour fee | 800.00 |

II. **ಈ ಕೆಳಗಿನ ಶುಲ್ಕಗಳಿಗೆ ಸಂಪೂರ್ಣ ವಿನಾಯಿತಿಯನ್ನು ನೀಡುವುದು.**

ಅನುಬಂಧ - II Admission fee for Constituent Colleges UG Programmes (Day)

19. Poor Students fund

SC/ST/Category - I Students

12. Poor Students fund

ಅನುಬಂಧ - III Admission fee for Constituent Colleges UG Programmes (Evening)

19. Poor Students fund

SC/ST/Category - I Students

12. Poor Students fund

III. **Student Co-operative fee ಯನ್ನು ಸೇರ್ಪಡೆಗೊಳಿಸಬೇಕಾಗಿಯೂ ಸಿಂಡಿಕೇಟು ನಿರ್ಣಯಿಸಿತು.**

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.4:51(2021)

ವಿಷಯ: ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಪ್ರಭಾರ ಪ್ರಾಂಶುಪಾಲರು ಎರಡು ವರ್ಷಗಳ ಅವಧಿಯನ್ನು ಪೂರ್ಣಗೊಳಿಸಿದ ಬಗ್ಗೆ.

ನಿರ್ಣಯ: ಪ್ರಭಾರ ಪ್ರಾಂಶುಪಾಲರ ಅವಧಿಯನ್ನು ನಿಗದಿಪಡಿಸಲು ಸಿಂಡಿಕೇಟಿನ ನಿರ್ಣಯದನುಸಾರ ಹೊರಡಿಸಲಾದ ಕುಲಸಚಿವರ ಅಧಿಸೂಚನೆ ಸಂಖ್ಯೆ: ಮಂವಿ/ಸಿಬ್ಬಂದಿ/38/2020-21/ಇ1 ದಿನಾಂಕ 22.01.2021ನ್ನು ಪರಿಗಣಿಸಿ, ಸದರಿ ಅಧಿಸೂಚನೆ ದಿನಾಂಕದಿಂದ ಅನ್ವಯವಾಗುವಂತೆ ಮುಂದಿನ ಎರಡು ವರ್ಷಗಳ ಅವಧಿಗೆ ನಿಗದಿಪಡಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಖಾಯಂ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳ ಜೇಷ್ಠತಾ ಪಟ್ಟಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ಕ್ರಮ ಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಹವಿ: ಸಾ.ಸ.4:52(2021) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ 2021-22ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2020-21ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಅನುಮೋದನೆ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು: ಸಾ.ಸ.4:53(2021) |
| ವಿಷಯ: | ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟು ಸದಸ್ಯರು - ಸಲ್ಲಿಸಿರುವ ಪ್ರಸ್ತಾವನೆ |
| ಪ್ರಸ್ತಾವನೆ 1 | To Introduce post-graduate course- M.A. in Kodava language at Mangalore University /Chikkaluvara P.G. Centre/Constituent Colleges of Mangalore University. |
| ನಿರ್ಣಯ: | ಸದರಿ ಕೋರ್ಸ್ ಗೆ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕಾರ್ಯಕ್ರಮಗಳನ್ನು ನಿಯಂತ್ರಿಸುವ ಅನುಶಾಸನಗಳುಸಾರ ಪಠ್ಯಕ್ರಮವನ್ನು ತಯಾರಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |
| ಪ್ರಸ್ತಾವನೆ 2 | To introduce Certificate/P.G.Diplooma in Kodava language at Mangalore University Chikkaluvara P.G.Centre /Constituent Colleges of Mangalore University. |
| ನಿರ್ಣಯ: | ಈ ಬಗ್ಗೆ ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ಕ್ರಮ ಕೈಗೊಳ್ಳಲಾಗಿರುವ ವಿಷಯವನ್ನು ಸದರಿಯವರಿಗೆ ತಿಳಿಸಲಾಯಿತು. |
| ಪ್ರಸ್ತಾವನೆ3 | To reduce the fees for the affiliation of these courses to private colleges |
| ನಿರ್ಣಯ | ಶುಲ್ಕಗಳನ್ನು 50% ಕಡಿತಗೊಳಿಸಬಹುದೆಂಬುದಾಗಿ ನಿರ್ಣಯಿಸಲಾಯಿತು. |
| ಪ್ರಸ್ತಾವನೆ4 | To pay Class - D workers promptly -their salary without delaying it. |
| ನಿರ್ಣಯ: | ವಿಶ್ವವಿದ್ಯಾನಿಲಯದಲ್ಲಿ ಕಾರ್ಯಾಚರಿಸುತ್ತಿರುವ ಎಲ್ಲಾ ನೌಕರರಿಗೂ ಕ್ಲಪ್ತ ಸಮಯದಲ್ಲಿ ವೇತನ/ಸಂಬಳ ಪಾವತಿಸಲಾಗುತ್ತಿದೆ. |
| ಪ್ರಸ್ತಾವನೆ5 | To give the office staff promotion which is due for a long period |
| ನಿರ್ಣಯ: | ಕ್ರಮ ಕೈಗೊಳ್ಳಲಾಗುವುದು. |

ಪ್ರಸ್ತಾವನೆ 6 To reduce the huge delay in the implementation of the agenda recommended by the Syndicate Members.

ನಿರ್ಣಯ: ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳಿಗೆ ಸಂಬಂಧಿಸಿದ ನಿರ್ಣಯಗಳನ್ನು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯದಲ್ಲಿ ಅನುಷ್ಠಾನಕ್ಕೆ ತರಲಾಗುವುದು.

ಪ್ರಸ್ತಾವನೆ7 To hasten the process of NEP implantation in the University

ನಿರ್ಣಯ: NEP 2020ನ್ನು ಮಂಗಳೂರು ವಿಶ್ವವಿದ್ಯಾನಿಲಯಲದಲ್ಲಿ ಸರಕಾರದ ಮಾರ್ಗಸೂಚಿಗಳನ್ನು ಅನುಸರಿಸಿಕೊಂಡು ಅಳವಡಿಸಿಕೊಳ್ಳಲಾಗುವುದು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು: ಸಾ.ಸ.4:54(2021)

ವಿಷಯ: ಡಿಎಸ್ಟಿ-ಪರ್ಸ್ ಪ್ರಯೋಗಾಲಯದ Liquid Nitrogen Plantಗೆ Voltage Stabiliser (3 Phase) ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

ನಿರ್ಣಯ: ದಿನಾಂಕ 11.06.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾ.ಸ.4:55 (2021)

ವಿಷಯ: ಶಿಕ್ಷಕೇತರ ಉದ್ಯೋಗಿಗಳಿಗೆ ಸಂಬಂಧಿಸಿದ ಜೇಷ್ಠತಾ **ಪಟ್ಟಿಯ** ಪ್ರಕಟಣೆ ಮತ್ತು ಮುಂಭಡ್ತಿ ನೀಡುವ ಕುರಿತು.

ನಿರ್ಣಯ: ಪ್ರಸ್ತಾವನೆಯನ್ನು ವಿಸ್ತೃತವಾಗಿ ಚರ್ಚಿಸಲಾಯಿತು.

ದಿನಾಂಕ 21.04.2020 ರ ಬೋಧಕೇತರ ಸಿಬ್ಬಂದಿಗಳ ತಾತ್ಕಾಲಿಕ ಜೇಷ್ಟತಾ ಪಟ್ಟಿಯ ಆಧಾರದಲ್ಲಿ ಮುಂಬಡ್ತಿಗೆ ಲಭ್ಯವಾಗುವ ಖಾಲಿ ಹುದ್ದೆಗಳಿಗೆದುರಾಗಿ ಎಲ್ಲಾ ವೃಂದಗಳ ಅರ್ಹಬೋಧಕೇತರ ಸಿಬ್ಬಂದಿಗಳಿಗೆ, ಮುಂಬಡ್ತಿಗೆ ಖಾಲಿ ಹುದ್ದೆಗಳು ಲಭ್ಯವಾದ ದಿನಾಂಕವನ್ನು ಅರ್ಹತಾ ದಿನಾಂಕವೆಂದು ಪರಿಗಣಿಸಿ ಮುಂಬಡ್ತಿಯನ್ನು ವಿಸ್ತರಿಸುವುದು. ಸದರಿ ಮುಂಬಡ್ತಿಯನ್ನು, ಬೋಧಕೇತರ ಸಿಬ್ಬಂದಿಗಳ ಜೇಷ್ಟತಾ ಪಟ್ಟಿಯು ಪರಿಷ್ಕರಣೆಗೊಂಡು ಅಂತಿಮಗೊಂಡಾಗ ಉಂಟಾಗಬಹುದಾದ ಬದಲಾವಣೆಗಳಿಗೆ ಬದ್ಧರಾಗಿರತಕ್ಕದ್ದು ಎಂಬ ಷರತ್ತಿನ ಮೇರೆಗೆ ವಿಸ್ತರಿಸಲು ಅನುಮೋದನೆ ನೀಡಲಾಗಿದೆ.

ಮುಂದುವರಿದು, ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳಲ್ಲಿ ಮಂಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿರುವ “ಹಿರಿಯ ಸಹಾಯಕ ಹುದ್ದೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಪರಿನಿಯಮ”ದ

ಅನುಸಾರ ಹಿರಿಯ ಸಹಾಯಕ ಹುದ್ದೆಗೆ ಭಡ್ತಿ ನೀಡುವ ಸಂದರ್ಭದಲ್ಲಿ ಪೋಷಕ ವೃಂದಗಳಾದ ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರ ಎರಡೂ ಹುದ್ದೆಗಳ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ತಿದ್ದುಪಡಿ ಪರಿನಿಯಮದಲ್ಲಿ ತಿಳಿಸಿರುವಂತೆ ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರರ ಅನುಪಾತವನ್ನು 4:1 ಎಂದು ಪರಿಗಣಿಸಿ ಸದರಿಯವರುಗಳಿಗೂ ಮೇಲ್ಕಂಡ ಷರತ್ತುಗಳನ್ನು ವಿಧಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಇತರ ವಿಷಯಗಳು**

1. Dr. Anitha Ravishankar, Associate Professor, Dept. of Studies and Reserch in Sociology, Mangalore University initiate disciplinary action as per the service rules in accordance with the law and constitute two members (Syndicate members) committee to hold such enqury and submit the report within one month time.

    1. Dr. M.S. Talawar - Chairman
    2. Dr. Parvathy Appaiah - Member
    3. Registrar - Member Secretary

   Provide the terms of reference to clarify the scope and ambit of the committee.

2. ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗಕ್ಕೆ ಸಂಬಂಧಿಸಿದ ಆಂತರಿಕ ಲೆಕ್ಕ ಪರಿಶೋಧನೆ Double Entry System of Accounting ಗೆ ಸಂಬಂಧಿಸಿ ಇಬ್ಬರು Consultantಗಳನ್ನು ನಿಯಮಾನುಸಾರ ನೇಮಕಾತಿ ಮಾಡಲು ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

3. ವಿಶ್ವವಿದ್ಯಾನಿಲಯದಲ್ಲಿ ಕಾರ್ಯಾಚರಿಸುತ್ತಿರುವ ಕಾನೂನು ಘಟಕಕ್ಕೆ ಒಬ್ಬ ನಿವೃತ್ತ ನ್ಯಾಯಾಧೀಶರು ಅಥವಾ ನುರಿತ ನ್ಯಾಯಾಧೀಶರನ್ನು ನೇಮಕಾತಿ ಮಾಡಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

4. ಪದವಿ ಪೂರ್ವ ವಿದ್ಯಾರ್ಥಿಗಳ ಉತ್ತಮ ಫಲಿತಾಂಶದಿಂದಾಗಿ ಪದವಿ ಕಾರ್ಯಕ್ರಮಗಳಿಗೆ ಹೆಚ್ಚಿನ ವಿದ್ಯಾರ್ಥಿ ಪ್ರವೇಶಾತಿ ಬೇಡಿಕೆಯಿರುವ ಸಂಭವವಿರುವುದರಿಂದ ಶೈಕ್ಷಣಿಕ ವರ್ಷ 2021-22ನೇ ಸಾಲಿಗೆ ಮಾತ್ರಅನ್ವಯವಾಗುವಂತೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಕಾಲೇಜುಗಳ

ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿಕೊಂಡು, ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿಗೆ ಅನುಮತಿಯನ್ನು ನೀಡಲು ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

5. ವಿಶ್ವವಿದ್ಯಾನಿಲಯದ ನಿಯಮಾವಳಿಯಂತೆ ಎಲ್ಲಾ ಕಾಲೇಜುಗಳಿಗೆ University Nominee ಯನ್ನು ನೇಮಕಾತಿ ಮಾಡಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

6. ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಆರೋಗ್ಯ ವಿಮೆ ಮಾಡಿಸಲು ಸೂಕ್ತ ಕ್ರಮ ಕೈಗೊಳ್ಳಲು ಸಿಂಡಿಕೇಟು ನಿರ್ಣಯಿಸಿತು.

7. ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ) ವಿಭಾಗದ ಪರೀಕ್ಷಾ ಕಾರ್ಯಗಳನ್ನು ಗಣಕೀಕರಣದ ಪ್ರಕ್ರಿಯೆಗೆ ಸಂಬಂಧಿಸಿ, ಸದರಿ ವಿಭಾಗಕ್ಕೆ ಅಗತ್ಯವಿರುವ ಒಬ್ಬ ಸಿಸ್ಟಮ್ ಅನಾಲಿಸ್ಟ್, 10 ಜನ ಸ್ಕ್ರಿಪ್ಟ್ ಅನಾಲಿಸ್ಟ್ ಮತ್ತು ಒಬ್ಬ ಜವಾನರನ್ನು ಹೊರಗುತ್ತಿಗೆ ಆಧಾರದಲ್ಲಿ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲು ಸಿಂಡಿಕೇಟು ಅನುಮತಿ ನೀಡಿತು.

8. ಪ್ರೊ. ಅರಬಿ ಯು., ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ಮೇಲಿನ ದೂರಿಗೆ ಸಂಬಂಧಿಸಿ, ನ್ಯಾಯಾಲಯದಿಂದ ಸ್ವೀಕೃತವಾಗಿರುವ ತೀರ್ಪಿನ ಸಾರಾಂಶವನ್ನು ಸಭೆಯ ಗಮನಕ್ಕೆ ತರಲಾಯಿತು. ತತ್ಸಂಬಂಧ ಸಿಂಡಿಕೇಟು ಈ ಕೆಳಗಿನ ನಿರ್ಣಯವನ್ನು ಕೈಗೊಂಡಿತು.

   The Syndicate has unanimously decided to prefer an appeal before the Division Bench challenging the legality and correctness of the order of the honourable High Court of Karnataka passed in W.P.No. 15070 of 2020 on all ground of substantial questions of law and facts.

   Advocate Mr.Arun Shyam is hereby appointed as a counsel for the university with a liberty to engage senior counsel based on his best professional judgement and also, to file a caveat petition and take all such legal actions and measures as may be required in accordance with the law.

9. ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿ ಎಸಗಲಾದ ಎಲ್ಲಾ ಸೈಬರ್ ಮತ್ತು ಇನ್ನಿತರ ಅಪರಾಧ ಕೃತ್ಯಗಳ ಬಗ್ಗೆ ಸಲ್ಲಿಸಿರುವ ದೂರಿನ ಕುರಿತು ನಿಯಮಾನುಸಾರ ಕಾನೂನು ಕ್ರಮ ಜರುಗಿಸಲು ಕುಲಸಚಿವರು (ಪರೀಕ್ಷಾಂಗ) ಇವರಿಗೆ ತಿಳಿಸಲಾಯಿತು. ಮುಂದುವರಿದು, ತನಿಖೆಯ ಪ್ರಗತಿಯ ಬಗ್ಗೆ ಮುಂದಿನ ಸಿಂಡಿಕೇಟು ಸಭೆಗೆ ಈ ಬಗ್ಗೆ ಮಾಹಿತಿ ನೀಡಲು ಸದರಿಯವರಿಗೆ ತಿಳಿಸಲಾಯಿತು.

10. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಹಿರಿಯ ಸಹಾಯಕ ಹುದ್ದೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿಯಂತ್ರಿಸುವ ತಿದ್ದುಪಡಿ ಪರಿನಿಯಮದ ಕುರಿತು ವಿಶ್ವವಿದ್ಯಾನಿಲಯದಲ್ಲಿ ಸ್ವೀಕೃತವಾಗಿರುವ ಸರ್ಕಾರ ಪತ್ರ ಸಂಖ್ಯೆ: ಇಡಿ 13 ಯುಡಿಎಸ್ 2020, ದಿನಾಂಕ 05.07.2021 ನ್ನು ಸಭೆಯ ಗಮನಕ್ಕೆ ತರಲಾಗಿ ತತ್ಸಂಬಂಧ ಈ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಯಿತು.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಹಿರಿಯ ಸಹಾಯಕ ವೃಂದಕ್ಕೆ ಪೋಷಕ ವೃಂದಗಳಾದ ಪ್ರಥಮ ದರ್ಜೆ ಸಹಾಯಕ ಹಾಗೂ ಶೀಘ್ರಲಿಪಿಗಾರರ ವೃಂದಗಳ ಮಂಜೂರಾದ ವೃಂದ ಬಲ ಈ ಕೆಳಕಂಡಂತಿದೆ:

ಅ) ಪ್ರಥಮ ದರ್ಜೆ ಸಹಾಯರು - 42 ಹುದ್ದೆಗಳು.

ಆ) ಶೀಘ್ರಲಿಪಿಗಾರರು - 11 ಹುದ್ದೆಗಳು.

ಪೋಷಕ ವೃಂದಗಳಿಗಿರುವ ಬಡ್ತಿ ಚಾನಲ್ ಗಳು:

ಅ) ಪ್ರಥಮ ದರ್ಜೆ ಸಹಾಯಕರು - ಹಿರಿಯ ಸಹಾಯಕ ಮಾತ್ರ

ಆ) ಶೀಘ್ರಲಿಪಿಗಾರರು - ಹಿರಿಯ ಸಹಾಯಕ ಮಾತ್ರ

ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಹಿರಿಯ ಸಹಾಯಕ ವೃಂದಕ್ಕೆ ಪೋಷಕ ವೃಂದಗಳಾಗಿ ಪ್ರಥಮ ದರ್ಜೆ ಸಹಾಯಕ ಹಾಗೂ ಶೀಘ್ರಲಿಪಿಗಾರರ ವೃಂದಗಳಾಗಿರುತ್ತವೆ. ಪ್ರಥಮ ದರ್ಜೆ ಸಹಾಯಕ ಹಾಗೂ ಶೀಘ್ರಲಿಪಿಗಾರರ ನಡುವಿನ ಬಡ್ತಿ ಅನುಪಾತ 6:1 ಆಗಿರುತ್ತದೆ. ಈ ಎರಡೂ ಪೋಷಕ ವೃಂದಗಳಿಗೆ ಹಿರಿಯ ಸಹಾಯಕ ವೃಂದಕ್ಕೆ ಬಡ್ತಿ ಹೊರತು ಪಡಿಸಿ ಬೇರೆ ಯಾವುದೇ ಬಡ್ತಿ ಚಾನಲ್ ಗಳು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇರುವುದಿಲ್ಲ.

ಎರಡೂ ಪೋಷಕ ವೃಂದಗಳ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಹಿರಿಯ ಸಹಾಯಕ ಹುದ್ದೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿಯಂತ್ರಿಸುವ ಪರಿನಿಯಮವನ್ನು "ಪೋಷಕ ವೃಂದಗಳ ಮಂಜೂರಾದ ಹುದ್ದೆಗಳ ವೃಂದ ಬಲದ ಆಧಾರದಲ್ಲಿ" ಅನುಪಾತವನ್ನು 4:1ಕ್ಕೆ ಮರು ನಿಗದಿಪಡಿಸುವ ಕರಡು ಪರಿನಿಯಮವನ್ನು ಅನುಮೋದಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ನಿರ್ಣಯಿಸಲಾಯಿತು.

ಮಾನ್ಯ ಕುಲಪತಿಗಳು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು. |